# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 493 |
| 2 | ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಇಂಗ್ಲೆಂಡ್‌ನ ಥೇಮ್ಸ್ ನದಿ ಮಾದರಿಯಲ್ಲಿ ಬೆಂಗಳೂರು ನಗರದ ಪ್ರಮುಖ ರಾಜಕಾಲುವೆಗಳನ್ನು ಅಭಿವೃದ್ಧಿಪಡಿಸಲು ರೂಪಿಸಲಾಗಿರುವ ಕೆ-100 ನಾಗರಿಕ ಜಲಮಾರ್ಗದ ಕಾಮಗಾರಿಯ ಪ್ರಸ್ತುತ ಹಂತವೇನು; ಈ ಯೋಜನೆಗೆ ಸರ್ಕಾರದಿಂದ ಮೀಸಲಿಟ್ಟಿರುವ ಅನುದಾನವೆಷ್ಟು; | ಕೆ.ಆರ್.ಮಾರುಕಟ್ಟೆಯಿಂದ ಬೆಳ್ಳಂದೂರು ಕೆರೆಯವರೆಗೆ ಒಟ್ಟು 9.2 ಕಿ.ಮೀ ಉದ್ದದ ರಾಜಕಾಲುವೆ ಅಭಿವೃದ್ಧಿ ಪಡಿಸಲು ಕೆ-100 ಯೋಜನೆ ತಯಾರಿಸಲಾಗಿದ್ದು, ಹಾಲಿ ಶೇಕಡ 95ರಷ್ಟು ಭೌತಿಕವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ.<br><br>ಸರ್ಕಾರದಿಂದ ಸದರಿ ಯೋಜನೆಗೆ ರೂ. 196.00 (175Cr + 21.00 Cr (12% ಜಿ.ಎಸ್.ಟಿ) ಕೋಟಿಗಳನ್ನು ನೀಡಲಾಗಿರುತ್ತದೆ.<br><br>ಸದರಿ ಯೋಜನೆಯ 5 ವರ್ಷಗಳ ನಿರ್ವಹಣೆಗೆ ಸಂಬಂಧಿಸಿದಂತೆ ರೂ. 5.04(4.50 Cr + 0.54 Cr (12% ಜಿ.ಎಸ್.ಟಿ) ಕೋಟಿಗಳನ್ನು ಜಿ.ಬಿ.ಎ ವತಿಯಿಂದ (ಅಂದಿನ ಬಿ.ಬಿ.ಎಂ.ಪಿ) ಭರಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿರುತ್ತದೆ. |
| ಆ) | ಸದರಿ ಕಾಮಗಾರಿಯ ಅನುಷ್ಠಾನಕ್ಕೆ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗಿದೆಯೇ; ಇದ್ದಲ್ಲಿ, ಗುತ್ತಿಗೆದಾರರ ಸಂಪೂರ್ಣ ವಿವರ ನೀಡುವುದು; (ಗುತ್ತಿಗೆದಾರರ ಹೆಸರು, ಸಂಸ್ಥೆಯ ಹೆಸರು, ವಿಳಾಸ, ಎಷ್ಟು ಮೊತ್ತಕ್ಕೆ ಗುತ್ತಿಗೆ ನೀಡಲಾಗಿದೆ) | ಮೇಲಿನಂತೆ ಸದರಿ ಕಾಮಗಾರಿಗೆ ಟೆಂಡರ್ ಅನುಮೋದನೆ ನೀಡಿದ ಬಳಿಕ ದಿನಾಂಕ: 05-05-2021 ರಂದು ಶ್ರೀ ವೆಂಕಟರಮಣೇಗೌಡ (Star Infra tech Formerly known as Star Builders and Developers), No. 177, 6th Main, KEB Layout, Sanjay Nagar, Bengaluru-560094 ರವರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. |
| ಇ) | ಈ ಯೋಜನೆಯನ್ವಯ ರಾಜಕಾಲುವೆಗಳಲ್ಲಿ ತ್ಯಾಜ್ಯ ನೀರು ಹರಿಯದಂತೆ ತಡೆಯಲು ರಚಿಸಿರುವ ಸಮಿತಿಯ ಜವಾಬ್ದಾರಿಗಳೇನು; ಮತ್ತು ತ್ಯಾಜ್ಯ ನೀರು ಹರಿಯದಂತೆ ಕೊಳವೆ ನಿರ್ಮಿಸುವ ಕಾರ್ಯದ ಪ್ರಗತಿ ಏನು; ಎಷ್ಟು ಕಡೆ ಕೊಳವೆಗಳನ್ನು ನಿರ್ಮಿಸಲಾಗಿದೆ; | ಕೆ-100 ಯೋಜನೆ ಪ್ರಾರಂಭವಾಗುವ ಮೊದಲು ಸದರಿ ಮಳೆನೀರು ಕಾಲುವೆ (SWD) ಯಲ್ಲಿ ಸುಮಾರು 130 MLD ತ್ಯಾಜ್ಯ ನೀರು ಹರಿಯುತ್ತಿತ್ತೆಂದು ಅಂದಾಜಿಸಲಾಗಿದ್ದು, ಬೆಂಗಳೂರು ಜಲಮಂಡಳಿಯಿಂದ ಕೆ-100 ಮಳೆಗಾಲುವೆಗೆ ತ್ಯಾಜ್ಯ ಹರಿಯದಂತೆ ತಡೆಯಲು 10 ಕಾಮಗಾರಿಗಳನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ಹಾಲಿ NGV ISPS ನಿಂದ 130-135 MLD ತ್ಯಾಜ್ಯ ನೀರನ್ನು ಕೆ&ಸಿ ವ್ಯಾಲಿ ಎಸ್.ಟಿ.ಪಿ.ಗೆ ಪಂಪ್ ಮಾಡಲಾಗುತ್ತಿರುತ್ತದೆ. |

.2...

| | | |
|---|---|---|
| ಇ) | ಕಾಮಗಾರಿ ಪೂರ್ಣಗೊಳ್ಳದೇ ಗುತ್ತಿಗೆದಾರರಿಗೆ ಸುಮಾರು ರೂ. 170 ಕೋಟಿ ಮೊತ್ತ ಪಾವತಿಸಿರುವ ಮಾಹಿತಿ ನಿಜವೇ; ಇದ್ದಲ್ಲಿ, ಗುತ್ತಿಗೆ ಒಪ್ಪಂದ ಕರಾರು ಷರತ್ತುಗಳೇನು; ಕಾಮಗಾರಿ ಪೂರ್ಣಗೊಳ್ಳದೇ ಬಿಲ್ ಪಾವತಿಸಲು ಅವಕಾಶವಿದೆಯೇ? (ಮಾಹಿತಿ ನೀಡುವುದು) | ಸದರಿ ಕಾಮಗಾರಿಯು ಭೌತಿಕವಾಗಿ ಶೇ. 95 ರಷ್ಟು ಪೂರ್ಣಗೊಂಡಿದ್ದು, ಈ ಹಂತದವರೆಗೂ 10 ನೇ ಮತ್ತು ಭಾಗಶಃ ಬಿಲ್ಲನ್ನು ಪಾವತಿಸಲಾಗಿದೆ. ಈ ತಹಲ್‌ವರೆಗೆ ಒಟ್ಟು ರೂ. ರೂ.160,75,19,621.00 (ಜಿ.ಎಸ್.ಟಿ ಒಳಗೊಂಡಂತೆ) ಗಳನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲಾಗಿರುತ್ತದೆ. |

**ನಅಇ 594 ಎಂಎನ್‌ವೈ 2026 (ಇ)**

**(ಕೃಷ್ಣ ಬೈರೇಗೌಡ)**
ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು